ನಾಂದಿಪದ

# ಕಲೆಗಳ ಸಹವಾಸ



ಸಾಹಿತ್ಯವು ಮನುಷ್ಯನ ಮೂಲ ಅಗತ್ಯವಾಗಿ ಉಳಿದಿದೆಯೆ ಎಂಬ ಪ್ರಶ್ನೆ ಬಹುಕಾಲದಿಂದ ಇದೆ. ಮನುಷ್ಯನ ಆಸಕ್ತಿ ನಿರಂತರವಾಗಿ ಬದಲಾಗುತ್ತಾ ಇರುತ್ತದೆ. ಅದು ಸಾಹಿತ್ಯ, ಸಂಗೀತ, ಸಿನಿಮಾ, ಚಿತ್ರಕಲೆ, ನಾಟಕಗಳಿಂದ ಕ್ರೀಡೆ, ರಾಜಕಾರಣ, ಕೃಷಿಯಂತಹ ವಿಷಯಗಳ ಕಡೆಗೂ ಚಲಿಸುತ್ತ ಇರುತ್ತದೆ. ಈಗಿತ್ತಲಾಗಿ ಆಗುತ್ತಿರುವುದು ಎಲ್ಲರಿಗೂ ಗೊತ್ತೇ ಇದೆ. ಮೊಬೈಲ್ ಹೊರತಾಗಿ ಬೇರೆ ಯಾವುದೂ ಮನುಷ್ಯನಿಗೆ ಮುಖ್ಯವೆನಿಸುತ್ತಿಲ್ಲ. ಮೊಬೈಲ್‌ನಲ್ಲಿ ಪ್ರತಿಕ್ಷಣ ಬಂದುಬೀಳುತ್ತಿರುವ ರಂಜನೆಯ ತುಣುಕುಗಳು ಮನಸ್ಸಿನ ತಿನಿಸಾಗುತ್ತಿವೆ. ಅಂತಹ ರಂಜನೆಗಳು ನೋಡುವವರ ಜೀವಕ್ಕೆ ಸದಾ ನೆಮ್ಮದಿ, ಶಾಂತಿ ಕೊಡುತ್ತಿರುತ್ತವೆ. ಸಹಜವಾಗಿ ಲಲಿತಕಲೆಗಳ ಕಡೆಗಿನ ಆಸಕ್ತಿ ಹಿಂದಕ್ಕೆ ಸರಿಯುತ್ತಿದೆ.

ಮನುಷ್ಯನೆಂಬ ಜೀವಿ ಮೊಬೈಲ್‌ಗೆ ಯಾಕೆ ಅಂಟಿಕೊಂಡಿರುತ್ತದೆ ಎಂಬುದಕ್ಕೆ ಸುಲಭ ಉತ್ತರಗಳಿಲ್ಲ. ಆ ಮಾಯಾಯಂತ್ರಕ್ಕೆ ಮನುಷ್ಯನನ್ನು ಅವನಿಗೆ ಗೊತ್ತಿಲ್ಲದಂತೆ ಕಟ್ಟಿಹಾಕಲಾಗಿದೆ. ಮತ್ತು ಅದರಿಂದ ತಪ್ಪಿಸಿಕೊಳ್ಳಬಹುದಾದ ಎಲ್ಲ ಹೊರದಾರಿಗಳನ್ನು ಮುಚ್ಚಲಾಗಿದೆ. ದಾರಿಗಳು ಇದ್ದರೂ ಇಲ್ಲದಂತೆ ಅವನೂ ನಟಿಸುತ್ತಿರುತ್ತಾನೆ. ಇದನ್ನು ಆನೆಗಳನ್ನು ಪಳಗಿಸುವ ವಿಧಾನಕ್ಕೆ ಹೋಲಿಸಬಹುದು. ಹಿಡಿದ ಕಾಡಾನೆಯನ್ನು ಮೊದಲಿಗೆ ದಪ್ಪ ಹುರಿಯಿಂದ ಕಟ್ಟಿಹಾಕುತ್ತಾರೆ. ಹಗ್ಗ ಹರಿದು ಆನೆ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತದೆ. ಆದರೆ, ಅದಕ್ಕೆ ಸಾಧ್ಯವೇ ಆಗುವುದಿಲ್ಲ. ಕಾಲ ಸರಿದಂತೆ ಹಗ್ಗ ಆನೆಗೆ ಎಷ್ಟು ರೂಢಿಯಾಗುತ್ತದೆ ಎಂದರೆ ಸಪೂರ ಹಗ್ಗದಿಂದ ಕಟ್ಟಿಹಾಕಿದರೂ ಅದು ತಪ್ಪಿಸಿಕೊಳ್ಳುವುದೇ ಇಲ್ಲ. ಮೊದಲು ಕಟ್ಟಿದ ದಪ್ಪ ಹಗ್ಗವೇ ಆನೆಯನ್ನು ಸಾಯುವ ತನಕವೂ ಕಟ್ಟಿಹಾಕಿರುತ್ತದೆ. ಅದು ಆನೆಯ ಮನಸ್ಸಿಗೆ ಹಾಕಿದ ಹಗ್ಗವಾಗುತ್ತದೆ. ಹಾಗೆಯೇ ಮೊಬೈಲ್‌ನಲ್ಲಿರುವ ಹಲಬಗೆಯ ರಂಗಿನ ಹಗ್ಗಗಳು ಮನುಷ್ಯನನ್ನು ತಪ್ಪಿಸಿಕೊಳ್ಳಲು ಬಿಡಲಾರವು. ಮೊಬೈಲ್‌ಮಾಯಾಂಗನೆಯ ಸೆರಗಿಗೆ ಯಾವಾಗಲೂ ಗಂಟುಹಾಕಿಕೊಂಡಿರುವುದು ನಮ್ಮ ಬೌದ್ಧಿಕ ನಿರುದ್ಯೋಗ ಪ್ರಕಟವಾಗುವ ರೀತಿ ಸಹ. ಇಂತಹ ಹಗ್ಗಗಳಿಂದ ತಪ್ಪಿಸಿಕೊಂಡು ಮನಸ್ಸಿನ ಜೀವಂತಿಕೆ ಉಳಿಸಿಕೊಳ್ಳಬೇಕಾದರೆ ಸಾಹಿತ್ಯ ಮಾತ್ರವಲ್ಲ ಬೇರೆ ಕ್ರಿಯಾಶೀಲ ಕಲೆಗಳ ಸನಿಹದ ಸಹವಾಸ ನಮಗೆಲ್ಲರಿಗೂ ಬೇಕಾಗುತ್ತದೆ.

ಮನಸ್ಸನ್ನು ಕ್ರಿಯಾಶೀಲಗೊಳಿಸುವ ಜೀವಂತ ಬರವಣಿಗೆಗಳನ್ನು ಕೊಡಲು 'ಮಯೂರ' ಯಾವತ್ತೂ ಪ್ರಯತ್ನಿಸುತ್ತ ಬಂದಿದೆ. ಈ ಸಂಚಿಕೆಯೂ ಕಾಡುವ ಕತೆಗಳ, ಬರಹಗಳ ಗುಚ್ಛವಾಗಿದೆ. ಭಾಷಾವಿಜ್ಞಾನಿ ಎಸ್.ಎನ್. ಶ್ರೀಧರ್ ಅವರ ಸಂದರ್ಶನ ಭಾಷೆ–ಸಾಹಿತ್ಯದ ಹಲವು ವಿಶಿಷ್ಟ ಅಂಶಗಳನ್ನು ಚರ್ಚಿಸಿದೆ. ಬರಗೂರು ರಾಮಚಂದ್ರಪ್ಪ ಅವರ ಮಹಾತ್ಮ ಗಾಂಧಿ ಕುರಿತ ಲೇಖನ, ಇತ್ತೀಚೆಗೆ ನಿಧನರಾದ ಲೇಖಕ ಶೇಷನಾರಾಯಣ ಅವರು ರೇಖಿಸಿದ ಸಾಹಿತಿಗಳ ಚಿತ್ರಗಳು ಓದುಗರನ್ನು ಮುದಗೊಳಿಸಬಲ್ಲವು.

**ಸಂದೀಪ ನಾಯಕ**